# **<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಪಾಂಡವಪುರ</u>**

ದಿನಾಂಕಃ **03.05.2025**

## **<u>ಸಿ.ಸಿ.ಸಂ.294/2024</u>**

ಫಿರ್ಯಾದಿಃ- ಕೆ.ಕೃಷ್ಣೇಗೌಡ ಬಿನ್ ಲೇಃ ಕೆಂಚೇಗೌಡ,
ಸುಮಾರು 44 ವರ್ಷ,
ವಾಸಃ ಮಾಡರಹಳ್ಳಿ ಗ್ರಾಮ, ಮೇಲುಕೋಟೆ ಹೋಬಳಿ,
ಪಾಂಡವಪುರ ತಾಃ

ಃ ವಿರುದ್ಧ ಃ

ಆರೋಪಿಃ- ಚಂದ್ರೇಗೌಡ ಬಿನ್ ಲೇಃ ಹನುಮೇಗೌಡ,
ಸುಮರು 64 ವರ್ಷ,
ವಾಸಃ ಹಿರೋಡೆ ಬೀದಿ,
ಪಾಂಡವಪುರ ಟೌನ್.

## <u>ಆರೋಪಣೆ</u>

**ಶ್ರೀಮತಿ. ಪಾರ್ವತಮ್ಮ.ಬಿ., ಬಿ.ಎ., ಎಲ್.ಎಲ್.ಎಂ., ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಪಾಂಡವಪುರ ಆದ ನಾನು ಆರೋಪಿಯಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಣೆಗೆ ಒಳಪಡಿಸುವುದೇನೆಂದರೆ,**

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂಃ 251 ರಡಿಯಲ್ಲಿನ ಆರೋಪ</u>**

ಆರೋಪಿಯಾದ ನೀವು ಪಿರ್ಯಾದುದಾರರ ಕಡೆಯಿಂದ, ದಿನಾಂಕಃ **20.11.2023** ರಂದು ರೂ.**3,00,000/-** ಗಳ ಹಣವನ್ನು ಸಾಲವಾಗಿ ಪಡೆದಿದ್ದು, ಇದನ್ನು ತಿರುವಳಿ ಮಾಡುವ ಬಗ್ಗೆ ಕರ್ನಾಟಕ ಗ್ರಾಮೀಣ ಬ್ಯಾಂಕ್, ಪಾಂಡವಪುರ ಶಾಖೆಗೆ ಸೇರಿದ, ರೂ.**3,00,000/-** ಗಳ ಚೆಕ್ ನಂಃ **876661** ದಿನಾಂಕಃ **01.02.2024** ರಂದು ಫಿರ್ಯಾದುದಾರರಿಗೆ ಕೊಟ್ಟಿದ್ದು, ಸದರಿ ಚೆಕ್ ನಲ್ಲಿನ ಹಣವನ್ನು ಪಡೆಯುವ ಬಗ್ಗೆ ಫಿರ್ಯಾದುದಾರರು ಕರ್ನಾಟಕ ಗ್ರಾಮೀಣ ಬ್ಯಾಂಕ್, ಪಾಂಡವಪುರ ಶಾಖೆಗೆ ಹಾಜರುಪಡಿಸಿದಾಗ, ಆರೋಪಿಯಾದ ನಿಮ್ಮ ಖಾತೆಯಲ್ಲಿ **"funds insufficient"** ಎನ್ನುವ ಕಾರಣದಿಂದ ಸದರಿ ಚೆಕ್ ಅಮಾನ್ಯಗೊಂಡಿದ್ದು, ತದನಂತರ **30** ದಿನಗಳ ಒಳಗಾಗಿ ಪಿರ್ಯಾದುದಾರರು ಆರೋಪಿಯಾದ ನೀಮಗೆ ದಿನಾಂಕ:**04.02.2024** ರಂದು ನೋಟೀಸ್

ನೀಡಿದ್ದು, ಸದರಿ ನೋಟೀಸ್ ಆರೋಪಿಯಾದ ನಿಮಗೆ ದಿನಾಂಕಃ **19.02.2024** ರಂದು ಖುದ್ದು ಜಾರಿಯಾಗಿರುತ್ತದೆ. ಆರೋಪಿಯಾದ ನೀವು ಪಿರ್ಯಾದುದಾರರ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆ ಮೂಲಕ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಾಯ್ದೆ**-138** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಪ್ರಶ್ನೆಃ **1** ಃ ಈಗ ನಿಮಗೆ ಓದಿ ಹೇಳಿದ ಆರೋಪದ ಸಾರಾಂಶ ತಿಳಿಯಿತೇ**?**
ಉತ್ತರಃ

ಪ್ರಶ್ನೆಃ **2**ಃ ಈಗ ನೀನು ಓದಿಸಿಕೊಂಡು ತಿಳಿದ ಆರೋಪಕ್ಕೆ ತಪ್ಪೊಪ್ಪುವೆಯೋ ಅಥವಾ ಅಧಿವಿಚಾರಣೆಯಾಗಲೀ ಎನ್ನುವೆಯೋ**?**

ಉತ್ತರಃ

**(**ಆರೋಪಿತನ ಯಥಾವತ್ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯ್ತು**.)**

**(ಪಾರ್ವತಮ್ಮ.ಬಿ.)**
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ಪಾಂಡವಪುರ.**

ಆರೋಪಿ ಸಹಿಃ